# ರಂಗೋಲಿ ಎಂದರೆ ಅಚ್ಚುಮೆಚ್ಚು



ವಿಯೆಟ್ನಾಂನಿಂದ ಬಂದ ಥುಹಾ

ವ್ಯಾಸಂಗಕ್ಕೆಂದು ಬರುವ ವಿದೇಶಿ ವಿದ್ಯಾರ್ಥಿಗಳು ಇಲ್ಲಿನ ಕಲೆ, ಸಂಸ್ಕೃತಿಗೆ ಮಾರು ಹೋಗುವುದು ಸಹಜ. ವಿಶ್ವದಲ್ಲೇ ಬಹು ಸಂಸ್ಕೃತಿ, ವಿಭಿನ್ನ ಆಚರಣೆಗೆ ಹೆಸರಾದ ದೇಶ ಭಾರತ. ಇಲ್ಲಿನ ಕೆಲ ಆಚರಣೆಗಳು ವಿದೇಶಿಗರನ್ನು ಗಾಢವಾಗಿ ಪ್ರಭಾವಿಸಿವೆ. ಎಲ್ಲವನ್ನೂ ಬೆರಗುಗಣ್ಣಿನಿಂದಲೇ ನೋಡುವ ವಿದೇಶಿಗರು, ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳಲು ಕಷ್ಟಪಟ್ಟಿರುವ ಪ್ರಸಂಗಗಳೂ ಉಂಟು. ಭಾರತಕ್ಕೆ ಬರುವ ಮುನ್ನ ಕೆಲ ವಿದ್ಯಾರ್ಥಿಗಳು ಇಲ್ಲಿನ ಪೂರ್ವಾಪರಗಳನ್ನು ಅಧ್ಯಯನ ಮಾಡಿ, ಆನಂತರ ಇಲ್ಲಿಯೇ ಇದ್ದು, ಪ್ರತ್ಯಕ್ಷ ಅನುಭವಗಳನ್ನು ಪಡೆಯಲು ಬಯಸುತ್ತಾರೆ. ವಿಯೆಟ್ನಾಂನಿಂದ ಬಂದ ಥುಹಾ ಕೂಡ ಅಂಥವರಲ್ಲೊಬ್ಬರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ವಿಷಯದಲ್ಲಿ ಎಂ.ಎ ಅಧ್ಯಯನ ಮುಗಿಸಿ ಸ್ವದೇಶಕ್ಕೆ ಮರಳಲು ಅಣಿಯಾಗುತ್ತಿರುವ ಥುಹಾ ಇಲ್ಲಿನ ಸಣ್ಣ ಸಣ್ಣ ವಿಚಾರಗಳನ್ನೂ ಸೂಕ್ಷ್ಮವಾಗಿ ಒರೆಗೆ ಹಚ್ಚಿದ್ದಾರೆ.

ಮನೆಯ ಅಂಗಳವನ್ನು ಗೃಹಿಣಿಯರು ನಿತ್ಯ ಮುಂಜಾನೆ ಶುಚಿಗೊಳಿಸಿ ಹಾಕುವ ರಂಗೋಲಿ ಥುಹಾ ಅವರನ್ನು ಬಹುವಾಗಿ ಆಕರ್ಷಿಸಿದೆ. ಮೊದಲ ಬಾರಿ ಕಂಡಾಗ ಆಶ್ಚರ್ಯಚಕಿತರಾದ ಅವರು, ರಂಗೋಲಿ ಪುಡಿ ಹಿಡಿದು ಚಿತ್ರ ರಚನೆಗೂ ಪ್ರಯತ್ನಿಸಿದ್ದಾರೆ. 'ಆದರೆ, ಇಲ್ಲಿಯವರು ಬಿಡಿಸಿದಷ್ಟು ಅಂದವಾಗಿ ರಂಗೋಲಿ ಬಿಡಿಸಲು ಬರಲಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಭಾರತೀಯರ ದೇವರ ಮೇಲಿನ ನಂಬಿಕೆ ಕೂಡ ಅವರನ್ನು ಇನ್ನಿಲ್ಲದಂತೆ ಕಾಡಿದೆ. ಕಾರು, ಬೈಕು, ಸೈಕಲ್ ಸೇರಿ ಇತರೆ ವಾಹನಗಳನ್ನು ಖರೀದಿಸಿದಾಗ ದೇವಸ್ಥಾನಕ್ಕೆ ಹೋಗಿ ಅವುಗಳಿಗೆ ಪೂಜೆ ಮಾಡಿಸುವುದು, ದಸರೆ ಸಮಯದಲ್ಲಿ ವಾಹನಗಳಿಗೆ ಹೂ ಹಾಕಿ ಅಲಂಕರಿಸುವುದು, ಕೆಲಸ ಮುಗಿಸಿ ಸಂಜೆ ದೇವಸ್ಥಾನದ ಒಳ ಹೊಕ್ಕು ಮನಸಿನ ದುಗುಡಗಳನ್ನು ಕಳಚಿಟ್ಟು ಮನೆ ತಲುಪುವುದು... ಇವೆಲ್ಲವನ್ನು ಕಂಡು ಚಕಿತರಾಗಿದ್ದಾರೆ ಥುಹಾ.

'ಇವೆಲ್ಲ ಇಲ್ಲಿನ ಸಂಸ್ಕೃತಿಯ ಭಾಗವೇ ಆಗಿವೆ. ಇಂಥ ನಂಬಿಕೆಗಳು ಕೂಡ ಮನುಷ್ಯ – ಮನುಷ್ಯರ ನಡುವೆ ಸಂಬಂಧ ಬೆಸೆಯಲು ಸಹಕಾರಿಯಾಗಿವೆ. ಇಲ್ಲಿನ ಜನ ಬಹುಬೇಗ ಇನ್ನೊಬ್ಬರ ಮೇಲೆ ನಂಬಿಕೆ ಇರಿಸುತ್ತಾರೆ' ಎನ್ನುವ ಥುಹಾ, ಅದಕ್ಕೊಂದು ಪ್ರಸಂಗವನ್ನೂ ನೆನಪಿಸಿಕೊಳ್ಳುತ್ತಾರೆ. 'ದಿನಸಿಯನ್ನು ಕೊಳ್ಳಲು ಅಂಗಡಿಗೆ ಹೋಗಿದ್ದೆ. ನನ್ನ ಬಳಿ ಚಿಲ್ಲರೆ ಇರಲಿಲ್ಲ. ಆಗ ಅಂಗಡಿ ಮಾಲೀಕ ತೊಂದರೆ ಇಲ್ಲ, ಇನ್ನೊಮ್ಮೆ ಬಂದಾಗ ಕೊಡಿ ಎಂದರು. ನಾನ್ಯಾರು ಎಂದು ಅವರಿಗೆ ಗೊತ್ತಿಲ್ಲ. ಆದರೂ, ನನ್ನ ಮೇಲೆ ನಂಬಿಕೆ. ಭಾರತೀಯರ ಉದಾರತೆಗೆ ಅಂದೇ ತಲೆದೂಗಿದೆ' ಎಂದು ಬೆರಗುಗಣ್ಣು ಬಿಡುತ್ತಾರೆ.

ಮಾಂಸಾಹಾರ ಪ್ರಿಯೆ ಥುಹಾ ಇಲ್ಲಿನ ಸಸ್ಯಾಹಾರಕ್ಕೆ ಒಗ್ಗಿಕೊಳ್ಳಲು ತುಂಬಾ ಕಷ್ಟಪಟ್ಟಿದ್ದಾರೆ. ಕಡೆಗೆ ಸಸ್ಯಾಹಾರವನ್ನೇ ಮೆಚ್ಚಿಕೊಂಡಿದ್ದಾರೆ. 'ಮಾಂಸಾಹಾರ, ಅದರಲ್ಲೂ ಗೋ ಮಾಂಸದಿಂದ ತಯಾರಿಸಿದ ಖಾದ್ಯ ನನಗೆ ಹೆಚ್ಚು ಇಷ್ಟ. ಆದರೆ, ಇಲ್ಲಿ ಮಾಂಸಾಹಾರದ ರೆಸ್ಟೋರೆಂಟ್‌ಗಳ ಸಂಖ್ಯೆ ಕಡಿಮೆ. ಇದ್ದರೂ, ದನದ ಮಾಂಸ ಸಿಗುವುದು ದುರ್ಲಭ. ಹಸುವಿಗೆ ಇಲ್ಲಿ ದೈವತ್ವದ ಸ್ಥಾನ ನೀಡಲಾಗಿದೆ. ಹಾಗಾಗಿ, ಅವುಗಳನ್ನು ಆಹಾರಕ್ಕಾಗಿ ಬಳಸುವುದು ಕಡಿಮೆ ಎಂದು ಗೊತ್ತಾಯಿತು. ಹಣ್ಣು, ತರಕಾರಿ, ಕಾಳುಗಳಿಂದ ತಯಾರಿಸಿದ ಆಹಾರ ಪದ್ಧತಿಯನ್ನು ರೂಢಿಸಿಕೊಂಡೆ. ಆಗ ಮೊದಲಿಗಿಂತಲೂ ನನ್ನ ಆರೋಗ್ಯ ಉತ್ತಮಗೊಂಡಿತು. ಈಗ ಸಂಪೂರ್ಣ ಸಸ್ಯಾಹಾರಿಯಾಗಿದ್ದೇನೆ' ಎನ್ನುತ್ತಾರೆ ಥುಹಾ.

ಕೈಯಲ್ಲಿ ಊಟ ಮಾಡುವುದು ಅವರಿಗೆ ಹೆಚ್ಚು ಆಪ್ತ ಎನಿಸಿದೆ. ಒಂದೇ ತಟ್ಟೆಯಲ್ಲಿ ಎಲ್ಲ ಬಗೆಯ ಖಾದ್ಯ ಬಡಿಸಿಕೊಂಡು ಊಟ ಮಾಡುವ ರೀತಿ ನೋಡಿ ಬೆರಗಾಗಿದ್ದ ಅವರು, ಈಗ ಅದೇ ಮಾದರಿ ಅನುಸರಿಸುತ್ತಿದ್ದಾರೆ. 'ವಿಯೆಟ್ನಾಂನಲ್ಲಿ ಒಂದು ಹೊತ್ತಿಗೆ ಕಡಿಮೆ ಎಂದರೂ ನಾಲ್ಕು ಬಗೆಯ ಖಾದ್ಯ ತಯಾರಿಸುತ್ತೇವೆ. ಅನ್ನದಿಂದ ತಯಾರಿಸಿದ ಬಾತ್, ಮಾಂಸಾಹಾರ ಅಥವಾ ಮೊಟ್ಟೆ, ತರಕಾರಿ ಖಾದ್ಯ, ಸೂಪ್. ಇವಿಷ್ಟರಲ್ಲಿ ನಮಗೆ ಇಷ್ಟವಾದ ಒಂದನ್ನು ಆಯ್ಕೆ ಮಾಡಿಕೊಂಡು ತಿನ್ನುತ್ತೇವೆ. ಇಲ್ಲಿಯ ರೀತಿ ಅನ್ನದ ಜತೆ ಸಾಂಬಾರ್, ರೊಟ್ಟಿಯ ಜತೆ ಪಲ್ಯ ಸೇರಿಸಿ ತಿನ್ನುವ ರೂಢಿ ಇಲ್ಲ. ಊಟ ಮಾಡಲು ಎಲ್ಲರೂ ಬಲಗೈ ಬಳಸುವುದನ್ನು ಕಂಡು ಬೆಚ್ಚಿದ್ದೆ. ಅದನ್ನು ರೂಢಿಸಿಕೊಳ್ಳಲೂ ಕಷ್ಟವಾಯಿತು. ಈಗ ಕೈಯಲ್ಲೇ ಚೆನ್ನಾಗಿ ಊಟ ಮಾಡುತ್ತೇನೆ. ಕೈಯಲ್ಲಿ ಊಟ ಮಾಡುವುದರಿಂದ ತಿನ್ನುವ ಆಹಾರ ಹೆಚ್ಚು ಇಷ್ಟವಾಗುತ್ತದೆ' ಎಂದು ಮೆಚ್ಚಿಕೊಳ್ಳುತ್ತಾರೆ.

ಇಲ್ಲಿನ ಸಮಯ ಹೊಂದಾಣಿಕೆಗೂ ಮೊದಮೊದಲು ಕಷ್ಟಪಟ್ಟಿದ್ದಾರೆ. ವಿಯೆಟ್ನಾಂನಲ್ಲಿ ಬೆಳಿಗ್ಗೆ 6.30ಕ್ಕೆ ತಿಂಡಿ, ಮಧ್ಯಾಹ್ನ 12ರಿಂದ 1ಕ್ಕೆ ಊಟ. ಶಾಲಾ ಕಾಲೇಜು ಶುರುವಾಗುವುದು ಬೆಳಿಗ್ಗೆ 7ಕ್ಕೆ. ಆಫೀಸ್ ಕೆಲಸ 8.30ಕ್ಕೆ ಆರಂಭವಾಗುತ್ತದೆ. ಹೋಟೆಲ್– ರೆಸ್ಟೋರೆಂಟ್, ಅಂಗಡಿ, ಮಾಲ್‌ಗಳು ಬೆಳಿಗ್ಗೆ 6ಕ್ಕೆ ಕಾರ್ಯಾರಂಭ ಮಾಡುತ್ತವೆ. 'ಇಲ್ಲಿಗೆ ಬಂದ ಹೊಸತು. ಇಲ್ಲಿನ ಊಟದ ಸಮಯದ ಬಗ್ಗೆ ಅರಿವಿರಲಿಲ್ಲ. ಬೆಳಿಗ್ಗೆ 6ಕ್ಕೆ ಹಸಿವು ಕಾಡತೊಡಗಿತು. ಹೋಟೆಲ್‌ನಲ್ಲಿ ತಿನ್ನೋಣವೆಂದು ಹೊರಬಂದೆ. ಇಡೀ ಬಡಾವಣೆಯೇ ಸ್ತಬ್ಧ. ಯಾವೊಂದು ಹೋಟೆಲ್‌ಗಳು ತೆರೆದಿರಲಿಲ್ಲ. ಕಷ್ಟಪಟ್ಟು ಹಸಿವು ತಾಳಿಕೊಂಡೆ. ಬರುಬರುತ್ತ ಇಲ್ಲಿನ ಸಮಯಕ್ಕೆ ಹೊಂದಿಕೊಂಡೆ' ಎಂದು ನೆನೆಯುತ್ತಾರೆ.

'ಸೀರೆ' ಅವರನ್ನು ಮಂತ್ರಮುಗ್ಧಗೊಳಿಸಿದೆ. ತಾವೂ ಅದನ್ನು ಒಂದೆರಡು ಬಾರಿ ತೊಟ್ಟು ಸಂಭ್ರಮಿಸಿದ್ದಾರೆ. 'ಸೀರೆ ಇಲ್ಲಿನ ಸಂಸ್ಕೃತಿಯನ್ನು ಬಿಂಬಿಸುವ ಪ್ರತೀಕದಂತಿದೆ. ಬೇರೆ ದೇಶಗಳಲ್ಲಿ ಸಂಪ್ರದಾಯ ಆಚರಣೆಗೆ ಒಂದು ಬಗೆಯ ಉಡುಪು, ದಿನ ಬಳಕೆಗೆ ಒಂದು ಬಗೆಯ ಉಡುಪು ಇರುತ್ತದೆ. ಆದರೆ, ಭಾರತದಲ್ಲಿ ಸೀರೆ ಸಾಮಾನ್ಯವಾಗಿದೆ. ಅದನ್ನು ಉಡಲು ತುಂಬ ಸಮಯ ಬೇಕು ಎಂದೆನಿಸಿತು. ಮೈಮೇಲೆ ಹಾಕಿಕೊಂಡಾಗ ಅದರ ಅಂದವೇ ಬೇರೆ' ಎಂದು ಸೀರೆ ಉಟ್ಟ ಅನುಭವ ಹಂಚಿಕೊಳ್ಳುತ್ತಾರೆ ಥುಹಾ.

ಎರಡು ವರ್ಷದ ಅವಧಿಯಲ್ಲಿ ದೆಹಲಿ, ಆಗ್ರಾ, ವಾರಣಾಸಿ, ಬುದ್ಧ ಗಯಾ, ಶಿಮ್ಲಾ, ಮನಾಲಿ, ಚೆನ್ನೈ, ಊಟಿ, ಕೇರಳ, ಹಾಸನ, ಬೆಂಗಳೂರು ಮೊದಲಾದ ಸ್ಥಳಗಳನ್ನೂ ವೀಕ್ಷಿಸಿರುವ ಥುಹಾ, ಭಾರತ ಸ್ನೇಹಪರತೆಯ ದೇಶ ಎಂದು ಮೆಚ್ಚಿಕೊಳ್ಳುತ್ತಾರೆ.

■ ಸುಮಾ ಬಿ.